ಮಳಲಿನ ಮೇಲೆಯೇ ಪವಡಿಸಿ, ಬೆಳಿಗ್ಗೆ ಸೂರ್ಯರಶ್ಮಿ ಚುಚ್ಚಿ ಎಬ್ಬಿಸಲು ಕಣ್ತೆರೆದು 'ನಾನೇಕೆ ಇಲ್ಲಿದ್ದೇನೆ?' ಎಂದು ಅರೆಕ್ಷಣ ಕಕ್ಕಾಬಿಕ್ಕಿಯಾಗಿ, ಬಳಿಕ ಕೊಡವಿಕೊಂಡು ಮನೆಯ ದಿಕ್ಕಿಗೆ ಹೊರಡುತ್ತಿದ್ದರು.

ಐದನೆಯ ಮನೆ ಕೆರೆಕೋಡಿಗೆ ಸಮೀಪದಲ್ಲಿ, ಬೆಸ್ತರೂ ಮೇದಾರರೂ ಮಂಡಕ್ಕಿ ಭಟ್ಟಿಯವರೂ ಗಾರೆಯವರೂ ನೆಲೆಸಿದ್ದ ಕೇರಿಯಲಿತ್ತು. ಇಲ್ಲಿಯೇ ನಾವು ಉಸಿರಾಡಿದಷ್ಟು ಸರಾಗವಾಗಿ ತಮಿಳು ತೆಲುಗುಗಳನ್ನು ಕಲಿತು ಚತುರ್ಭಾಷಾ ಪಂಡಿತರಾಗಿದ್ದು. ಮೀನುಗಾರಿಕೆ, ಈಜಾಟ, ಸರ್ಪಸಂಹಾರ ಇತ್ಯಾದಿ ಜೀವರಕ್ಷಕ ವಿದ್ಯೆಗಳನ್ನು ಕೈವಶ ಮಾಡಿಕೊಂಡಿದ್ದು. ಖಬರಸ್ಥಾನ ಮತ್ತು ಕೆರೆಯ ಬದಿಯಿದ್ದ ಕಾರಣ ಹಾವುಗಳು ಸ್ವತಂತ್ರವಾಗಿ ವಿಹರಿಸುತ್ತಿದ್ದವು. ನಾನು ಯಾರದೇ ಮನೆಗೆ ಹಾವು ಹೊಕ್ಕರೆ ತಕ್ಷಣ ಬುಲಾವು ಬರುವಷ್ಟು ಖ್ಯಾತಿ ಗಳಿಸಿದೆ. ಪ್ರತಿಯೊಂದು ಮನೆಯೂ ನವನವೀನ ಅನುಭವವನ್ನು ಧಾರೆಯೆರೆದು ನಮ್ಮನ್ನು ಸಕಲ ಕಲಾವಲ್ಲಭರನ್ನಾಗಿ ರೂಪಿಸಿತು; ಪರೋಪಕಾರ, ಜಾತ್ಯತೀತತೆ, ಧರ್ಮಸಮನ್ವಯ ಇತ್ಯಾದಿ ವಜನ್ನಾದ ಪದಪುಂಜಗಳಲ್ಲಿ ಅದೃಶ್ಯವಾಗಿ ಅಡಗಿರುವ ತತ್ವಗಳನ್ನೆಲ್ಲ, ಉಸಿರಾಟದ ಗಾಳಿಯಷ್ಟು ಸಹಜವಾಗಿ ತುಂಬಿತು.

ಕೊನೆಗೊಮ್ಮೆ ಬಾಡಿಗೆ ಮನೆಗಳಿಂದ ಸಾಕಾಗಿಹೋದ ಅಪ್ಪ ಒಂದು ಹಳೇಮನೆಯನ್ನು ಖರೀದಿಸಿದನು. ಸಾಗುವಾನಿ ಮರದ ಕಾಮಗಾರಿಯಿದ್ದ ಈ ಮನೆ ಸುಂದರವಾಗಿತ್ತು. ಮಿಗಿಲಾಗಿ ಸ್ವಂತದ್ದಾಗಿತ್ತು. ನಾವೆಲ್ಲ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮದಿಂದ ಅದರೊಳಗೆ ಹೊಕ್ಕಿಕೊಂಡೆವು. ಆದರೆ ಶಿವಮೊಗ್ಗೆಯಲ್ಲಿ ನೌಕರಿ ಹಿಡಿದ ನನಗೆ ಬಾಡಿಗೆ ವಾಸದಿಂದ ಬಿಡುಗಡೆ ಸಿಗಲಿಲ್ಲ. ನಾನು ಪ್ರಪ್ರಥಮವಾಗಿ ದೊಡ್ಡ ಬಂಗಲೆಯೊಂದರ ಔಟ್‌ಹೌಸನ್ನು ಹಿಡಿಯಬೇಕಾಯಿತು. ಕ್ರೈಸ್ತರಾದ ಮನೆ ಮಾಲೀಕರು ವಿಶ್ರಾಂತ ಅಧಿಕಾರಿಯಾಗಿದ್ದು ಸಿಕ್ಕಾಪಟ್ಟೆ ಗತ್ತಿನವರಾಗಿದ್ದರು. ಗೇಟಿನ ಚಿಲಕ ಹಾಕುವಾಗ ಕೊಂಚ ಸದ್ದಾದರೂ ಆಕ್ಷೇಪಿಸುತಿದ್ದರು. ಇಷ್ಟಾದರೂ ಸಭ್ಯ ಬ್ರಹ್ಮಚಾರಿಯಾಗಿ ಮೆಸ್ಸುಗಳಲ್ಲೊ ಕೈಬಾಯಿ ಸುಟ್ಟುಕೊಂಡೊ ಉಣ್ಣುತ್ತಿದ್ದ ನನ್ನ ಮೇಲೆ, ಇಡೀ ಕುಟುಂಬ ಕ್ರಿಸ್ತ ಕರುಣೆಯನ್ನೇ ಹರಿಸಿತು. ಪ್ರತಿ ರವಿವಾರ ಹರಿವಾಣದ ತುಂಬ ಘಮಘಮಿಸುವ ಭಕ್ಷ್ಯಗಳು ಆಗಮಿಸುತ್ತಿದ್ದವು. ಈ ಆಹಾರ ಸರಬರಾಜು ವ್ಯವಸ್ಥೆ ಸರಾಗವೂ ಶಾಶ್ವತವೂ ಆಗಿರಲೆಂದು, ಅವರಿಗೆ ಕಾಣಿಸುವಂತೆ ಚರ್ಚಿಗೆ ಹೋಗಿರಬರುತ್ತಿದ್ದೆ; ಚರ್ಚಿನ ಸ್ತೋತ್ರಗೀತೆಗಳನ್ನು ಕಂಠಸ್ಥ ಮಾಡಿ ಅವರಿಗೆ ಕೇಳಿಸುವಂತೆ ಗುನುಗಿಕೊಳ್ಳುತ್ತಿದ್ದೆ. ಆದರೆ ಅಲ್ಲಿ ನಿವಾರಿಸಲಾಗದ ಎರಡು ಕಂಟಕಗಳಿದ್ದವು: ಒಂದು–ಬಸ್ ಗ್ಯಾರೇಜುಗಳು ಸಮೀಪವಿದ್ದು ರಾತ್ರಿಯಿಡೀ ರಿಪೇರಿ ಸಪ್ಪಳ ಬರುತ್ತಿದ್ದುದು. ಎರಡು–ಬೆಳಗಿನ ಜಾವದ ಸಿಹಿನಿದ್ದೆಯಲ್ಲಿರುವಾಗ ತಪರಾಕಿ ಕೊಟ್ಟಂತೆ ಚರ್ಚು, ಮಸೀದಿ, ಗುಡಿಗಳ ಮೈಕುಗಳು ಎಬ್ಬಿಸುತ್ತಿದ್ದುದು.

ರಾತ್ರಿಯಲ್ಲಿ ನಿದ್ರಾವಿರೋಧಿಯೂ ಹಗಲಲ್ಲಿ ಸೊಂಪಾದ ಹುಲ್ಲುಗಾವಲಿನಂತೆಯೂ ಇದ್ದ ಆ ಖೋಲಿಯನ್ನು ಭಾರವಾದ ಹೃದಯದಿಂದ ತ್ಯಜಿಸಬೇಕಾಯಿತು. ಕಾರಣ, ನಾನು ಮದುವೆಯಾಗಲು ನಿಶ್ಚಯಿಸಿದ್ದೆ. ಸಂಸಾರಸ್ಥರಿಗೆ ತಕ್ಕುದಾದ ಕೋಣೆಯಿರುವ ಮನೆಯೊಂದರ ತುರ್ತು ತಲಾಶಿನಲ್ಲಿದ್ದೆ. ಇದು ಹೇಗೊ ಪತ್ತೆಯಾಗಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಮಹಾನಗರದಲ್ಲಿದ್ದ ಒಂದೊಂದು ಮನೆಯನ್ನು ಹುಡುಕಿ ತಂದರು. ಅವರ ಗುರುಭಕ್ತಿಗೆ ಸಂತೋಷಪಡುತ್ತ ಅವುಗಳಲ್ಲಿ ಜೈಲಿಗೆ ಸಮೀಪದಲ್ಲಿರುವ ಒಂದು ಮನೆಯನ್ನು